ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.286/2020

| | | | |
|---|---|---|---|
| ಹೆಸರು | : | ನಟರಾಜು | ಸಿ .ಡಬ್ಲ್ಯೂ :5 |
| ತಂದೆ ಹೆಸರು | : | ಎನ್ ಕೆಂಪಯ್ಯ | ಪಿ .ಡಬ್ಲ್ಯೂ :6 |
| ವಯಸ್ಸು | : | 59 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕುರುಬರಹಳ್ಳಿ | |

ಸಾಕ್ಷಿಯನ್ನು ದಿಃ 09-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ನಿಪಿ -2 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಬಿ ) ಎಂದು ಗುರುತಿಸಲಾಯಿತು.

ದಿಃ 22-05-2020 ರಂದು ಮಧ್ಯಾಹ್ನ 12.30 ರ ಸಮಯದಲ್ಲಿ ಕಲ್ಲೂರು ಕ್ರಾಸ್ ಗೆ ಪೊಲೀಸರು ಬಂದಿದ್ದರು . ಆ ಸಮಯ ಚಾಸಾ -1 ರವರ ಮನೆಯ ಬಳಿ ಮಹಜರು ಮಾಡಿದ್ದರು . ಆ ಸಮಯ ಪೊಲೀಸರು ನೀಲಿಗಿರಿ ದೊಣ್ಣೆ , ಕಲ್ಲು ಮತ್ತು ಚಾಸಾ -1 ರವರು ಧರಿಸಿದ್ದ ಬನಿಯನ್ ನ್ನು ಅಮಾನತ್ತು ಪಡಿಸಿಕೊಂಡಿದ್ದಾರೆ . ಅವುಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ರಿಂದ 3 ನ್ನು ನೋಡಿ ಗುರುತಿಸಿದ್ದಾರೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ಯಾರು ನಿಮ್ಮನ್ನು ಮಹಜರು ಸ್ಥಳಕ್ಕೆ ಕರೆತಂದರು ಎಂದರೆ ಸಾಕ್ಷಿಯು ಕೃತ್ಯ ಸ್ಥಳದ ಸಮೀಪದಲ್ಲಿ ಚಹಾ ಅಂಗಡಿಯೊಂದು ಇತ್ತು ಅಲ್ಲಿ ಚಹಾ ಕುಡಿಯುತ್ತಿದ್ದೆ ಪೊಲೀಸರು ಬಂದು ಕರೆದರು . PSI ರವರು ನನಗೆ ಕರೆದರು . 3-4 ಜನ ಪೊಲೀಸರು ಬಂದಿದ್ದರು . ಅವರುಗಳು ಸುಮಾರು ಅರ್ಧ ಗಂಟೆಯವರೆಗೆ ಇದ್ದರು . ನಿಪಿ -2 ರಲ್ಲಿ ಏನು ಬರೆದಿದೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿಯು 21 ನೇ ತಾರೀಕಿನದ್ದು ಗಲಾಟೆ ಮಾಡಿಕೊಂಡಿದ್ದಾರೆ ಆ ಸಂಬಂಧ ಮಹಜರಿಗೆ ಬಂದಿದ್ದೇವೆ , ಮು ಮಾ -1 ರಿಂದ 3 ನೇ ಅಮಾತನತ್ತು ಪಡಿಸಿಕೊಂಡಿದ್ದೇವೆ , ನಾವು ಮಹಜರಿಗೆ ಬಂದಿದ್ದೇವೆ ಎಂಬುದಕ್ಕೆ ಸಹಿ ಮಾಡಿ ಎಂದು ಕೇಳಿದರು ಆದುದರಿಂದ ಸಹಿ ಮಾಡಿದ್ದೇನೆ ಎಂದು ತಿಳಿಸಿದ್ದಾರೆ . ಆ ದಿನ ನಿಪಿ -2 ಕ್ಕೆ ಪ್ರಸನ್ನ ಕುಮಾರ್ ರವರು ಸಹಿ ಮಾಡಿದ್ದಾರೆ . ಮು ಮಾ -1 ರಿಂದ 3 ನ್ನು ಪೊಲೀಸ್ ಕಾನ್ಸ್ ಟೇಬಲ್ ರವರು ಚಾಸಾ -1 ರವರ ಮನೆಯ ಬಳಿಗೆ ತಂದರು. ಆ

ಸಮಯ  ನಾನು ಮತ್ತು ಪ್ರಸನ್ನ ಕುಮಾರ್ ರವರು ಇದ್ದೆವು .

ಚಾಸಾ -1 ರವರು  ಕಲ್ಲೂರು ಕ್ರಾಸ್ ನಲ್ಲಿ ಹೋಟೆಲ್ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ . ಅಲ್ಲಿಂದ 3-4 ಕಿಲೋ ಮೀಟರ್ ಅಂತರದಲ್ಲಿ ನಮ್ಮ ಗ್ರಾಮವಿದೆ  ಆಗಾಗ ಚಹಾ ಕುಡಿಯಲು ಹೋಗುತ್ತೇನೆ ಎಂದರೆ ಸರಿ . ಚಾಸಾ -1 ರವರು ನನಗೆ ಪರಿಚಿತ ಇರುವ ಕಾರಣ ಪೊಲೀಸರು ಕಲ್ಲೂರು ಕ್ರಾಸ್ ಗೆ ಬರದಿದ್ದರೂ  ಮು ಮಾ -1 ರಿಂದ 3 ನ್ನು ಅಮಾತನ್ನು ಪಡಿಸಿಕೊಳ್ಳದೇ ಇದ್ದರು ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ ,  ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.